1624(2144) ಶ್ರೀ ಪಾಟೀಲ್ ಪಿ. ಆರ್ (ಅಳಂದ್) ಮಾನ್ಯ ಮುಖ್ಯ ಮಂತ್ರಿಯವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಮಂತ್ರಿ ಮಂಡಲದಿಂದ ಶಾಸಕರವರೆಗೆ ಸರ್ಕಾರದ ನಡಾವಳಿಯಲ್ಲಿ ಶಿಷ್ಟಾಚಾರದ ಲೋಪ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಲವಾರು ಸಭೆ – ಸಮಾರಂಭಗಳಲ್ಲಿ ಮತ್ತು ಕಚೇರಿಗಳಲ್ಲಿ ಅಧಿಕಾರಿಗಳೊಂದಿಗೆ ಮಂತ್ರಿಗಳು ಮತ್ತು ಶಾಸಕರ ಜೊತೆಯಲ್ಲಿ ಒಂದೇ ವೇದಿಕೆಯ ಮೇಲೆ ಆಸೀನರಾಗುವುದು ಶಿಷ್ಟಾಚಾರವೇ ಅಥವಾ ಶಿಷ್ಟಾಚಾರದ ಆಪರಾರಚಾರವೇ;

ಇ. ಈ ಲೋಪ ಸರಿಪಡಿಸಲು ಹಾಗೂ ಜನಪ್ರತಿನಿಧಿಗಳಿಗೆ ಸರಕಾರಿ ಕಚೇರಿಗಳಲ್ಲಿ ಸಿಗಬೇಕಾದ ಗೌರವ ಮತ್ತು ಮಾನ್ಯತೆಯನ್ನು ಕಾಪಾಡಲು ಜನ ಸಾರ್ವಭೌಮತ್ವವನ್ನು ಎತ್ತಿ ಹಿಡಿಯಲು ಸರ್ಕಾರವು ಪ್ರಸಕ್ತ ಶಿಷ್ಟಾಚಾರದ ಪ್ರತಿಯನ್ನು ಎಲ್ಲಾ ಇಲಾಖೆಗಳಿಗೂ ಕಳುಹಿಸಲು ಮತ್ತು ಇದನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶವಿಯ್ಯಲು ಇರುವ ಅಡ್ಡಿ ಆತಂಕಗಳೇನು;

ಈ. ಶಿಷ್ಟಾಚಾರವನ್ನು ಉಲ್ಲಂಘಿಸಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಒಂದಿದೆಯೇ ಹಾಗಿದ್ದಲ್ಲಿ ಶಿಷ್ಟಾಚಾರವನ್ನು ಉಲ್ಲಂಘಿಸಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಧರಂಸಿಂಗ್ (ಮಾನ್ಯ ಮುಖ್ಯ ಮಂತ್ರಿಯವರು):

ಅ. ಸರ್ಕಾರದ ವತಿಯಿಂದ ಏರ್ಪಡಿಸುವಂತಹ ಸಭೆ, ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ಶಾಸಕರನ್ನು ಕಡ್ಡಾಯವಾಗಿ ಆಹ್ವಾನಿಸಬೇಕು. ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಬೇಕು ಮತ್ತು ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ ಹಾಗೂ ಇತರೆ ಸನ್ನಿವೇಶಗಳನ್ನು ಆಧರಿಸಿ ಸಚಿವರು ರಾಜ್ಯ ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಅಧ್ಯಕ್ಷರು ಮುಖ್ಯ ಅತಿಥಿ ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕೆಂದು ಹಲವಾರು ಸೂಚನೆಗಳನ್ನು ಸಮಾರಂಭ ಏರ್ಪಡಿಸುವಂತಹ ಅಧಿಕಾರಿಗಳಿಗೆ ನೀಡಲಾಗಿದೆ. ಅಲ್ಲದೆ ಸಚಿವರುಗಳು ಪಾಲ್ಗೊಳ್ಳುವಂತಹ ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುವ ಪರಿಹಾರವನ್ನು ನಿಲ್ಲಿಸಬೇಕೆಂದು ಸಹ ಸೂಚನೆಗಳನ್ನು ನೀಡಲಾಗಿದೆ. ಆದಾಗ್ಯೂ, ಕೆಲವು ಲೋಪದೋಷಗಳು ಆಗಿವೆ ಎಂಬ ಆರೋಪಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಸಂಬಂಧ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ವರದಿಯನ್ನು ತರಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ. ಮೇಲೆ ಉಲ್ಲೇಖಿಸಿರುವ ಸೂಚನೆಗಳನ್ನು ಮತ್ತೊಮ್ಮೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಪುನರುಚ್ಚರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

1626(1824) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಗದಗ ಜಿಲ್ಲೆಯ ಹುಲಿಗುಡ್ಡ ವಿತ ನೀರಾವರಿ ಯೋಜನೆಗೆ ಖರ್ಚಾದ ಹಣವೆಷ್ಟು ; ಯೋಜನೆ ಪೂರ್ಣಗೊಳಿಸಲು ಪ್ರಸ್ತುತ ಬಜೆಟ್‌ನಲ್ಲಿ ಒದಗಿಸಲಾದ ಹಣ ಎಷ್ಟು;

ಆ. ಕಾಮಗಾರಿಯನ್ನು ಪೂರ್ಣಗೊಳಿಸಿ ರೈತರಿಗೆ ನೀರು ಒದಗಿಸಲು ಕಾಲಮಿತಿ ಏನಾದರೂ ಹಾಕಿಕೊಳ್ಳಲಾಗಿದೆಯೇ ;

ಇ. ಸದರಿ ಯೋಜನೆಯಿಂದ ಹಡಗಲಿ, ಮುಂಡರಗಿ, ಕೊಪ್ಪಳ ಮತ್ತು ಗದಗ ತಾಲ್ಲೂಕುಗಳಿಗೆ ತಾಲ್ಲಕುವಾರು ನೀರಾವರಿ ಆಗುವ ವಿಸ್ತೀರ್ಣವೆಷ್ಟು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ. ಗದಗ ಜಿಲ್ಲೆಯ ಸಿಂಗಟಾಲೂರು (ಹುಲಿಗುಡ್ಡ) ವಿತ ನೀರಾವರಿ ಯೋಜನೆಗೆ ಪ್ರಾರಂಭದಿಂದ ಡಿಸೆಂಬರ್–2004ರ ಅಂತ್ಯದವರೆಗೆ ಮಾಡಿರುವ ವೆಚ್ಚ ರೂ. 29.12 ಕೋಟಿಗಳು.